# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

## ಸಿಸಿ ನಂ.12/2015

**ಫಿರ್ಯಾದಿಃ-** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ ಠಾಣೆ.

**-ಃಃ ವಿರುದ್ದ ಃಃ-**

**ಆರೋಪಿತರುಃ -** 1. ಶರಣಪ್ಪ@ ಶರಣಬಸಪ್ಪ ತಂದೆ ಚಂದ್ರಕಾಂತ ಗಾಡಿ,
27 ವರ್ಷ, ಉಃ ಎಸ್.ಆರ್.ಎಸ್.ಎಲ್. ಫ್ಯಾಕ್ಟ್ರಿ
ಹವಳಗಾದ ಪೆಟ್ರೋಲ ಪಂಪನಲ್ಲಿ ಕಂಪ್ಯೂಟರ ಆಪರೇಟರ,
ವಾಸಃ ಮೋಳಿ ಗ್ರಾಮ, ತಾಃ ಅಫಜಲಪೂರ, ಜಿಃ ಕಲಬುರಗಿ.

3. ಮದಾರಸಾಬ ತಂದೆ ಚಾಂದಪಟೇಲ ಹಡಗಿಲ್,
20 ವರ್ಷ, ಉಃ ಗುತ್ತಿಗೆದಾರ, ವಾಸಃ ಹಿಂಚಗೇರಾ ಗ್ರಾಮ,
ತಾಃ ಅಫಜಲಪೂರ, ಜಿಃ ಕಲಬುರಗಿ.

5. ಗಜಾನನ ತಂದೆ ಮಹಾದೇವ ರೇಡೆಕರ್, 40 ವರ್ಷ,
ಉಃ ಖಾಸಗಿ ಕೆಲಸ, ವಾಸಃ ಕೊರವಿ ಗಲ್ಲಿ ಬೆಳಗಾಂವ.

## ದೋಷಾರೋಪಣೆ

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕಃ21.01.2013 ರಂದು ಅಫಜಲಪೂರ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಹವಳಗಾ ಸಿಮಾಂತರದಲ್ಲಿ ಬರುವ ಶ್ರೀ ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಯಲ್ಲಿ ಸದರಿ ಆರೋಪಿತರು ತಮ್ಮ ಲಾಭಕ್ಕೊಸ್ಕರ ರೇಣುಕಾ ಶುಗರ ಫ್ಯಾಕ್ಟ್ರಿಗೆ ಸಂಬಂಧ ಪಟ್ಟ ಶಾಲಾ ವಾಹನ ನಂ.ಕೆಎ-32-ಬಿ-2291 ನೇದ್ದರಲ್ಲಿ ಇಟ್ಟಿದ ಕಂಪನಿಯ 20 ಇಂಡೆಂಟಗಳ ಸ್ಲಿಪಗಳನ್ನು ಕಳುವು ಮಾಡಿಕೊಂಡು ಹೋಗಿದ ಕಾರಣ, ಆ ಮೂಲಕ ನೀನು ಭಾ.ದಂ.ಸಂ.ಕಲಂ.379 ಸಹವಾಚಕ ಕಲಂ.34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ 1, 3 ಮತ್ತು 5ನೇ ಆರೋಪಿತರಾದ ನೀವುಗಳು ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಚಾಸಾ-4 ರಮೇಶ ಮಾಳಗಿ ರವರ ಖೋಟಿ ಸಹಿಯನ್ನು ಮಾಡಿ, ಸ್ಲಿಪಗಳನ್ನು ಹಸ್ತಾಂತರಿಸಿ

ಅದರ ಮೇಲಿಂದ ಮತ್ತೋಂದು ಕಂಪ್ಯೂಟರಿನಿಂದ ನಕಲಿ ಸ್ಲಿಪನ್ನು ತಯಾರಿಸಿ ದುರುಪಯೋಗಪಡಿಸಿಕೊಂಡು, ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ವಂಚನೆ ಮತ್ತು ಮೋಸ ಉಲ್ಲಂಘನೆ ಮಾಡಿದ ಕಾರಣ, ಆ ಮೂಲಕ ನೀನು ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.406 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಲಾದ ದಿನಾಂಕದಂದು ಸದರಿ 1, 3 ಮತ್ತು 5ನೇ ಆರೋಪಿತರಾದ ನೀವುಗಳು ಅನ್ಯಾಯದ ಲಾಭವನ್ನು ಪಡೆಯಲು ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿ ಮಾಡಿ, ಅಫಜಲಪೂರದಲ್ಲಿರುವ ಮಹಾಂತೇಶ್ವರ ಏಜನ್ಸಿ ಪೆಟ್ರೋಲ ಪಂಪ ಬಗಲೂರನಲ್ಲಿರುವ ಭಾಗ್ಯವಂತಿ ಪೆಟ್ರೋಲ ಪಂಪ ಮತ್ತು ಘತ್ತರಗಾ ಹತ್ತಿರ ಇರುವ ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ದಿನಾಂಕಃ 24.01.2013 ರಿಂದ 21.02.2013 ರ ಅವಧಿಯಲ್ಲಿ ಇಂಡೆಂಟ ಸ್ಲಿಪಗಳನ್ನು ಕೊಟ್ಟು ಒಟ್ಟು 2265 ಲೀಟರ ಡಿಜಲನ್ನು ತೆಗೆದುಕೊಂಡು ಬಂದು ಮಾರಾಟ ಮಾಡಿ ಸ್ವಂತಕ್ಕೆ ಉಪಯೋಗಿಸಿಕೊಂಡು ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ಮೋಸ, ವಂಚನೆ ಮಾಡಿ ನಷ್ಟವುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.417 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಲಾದ ದಿನಾಂಕದಂದು ಸದರಿ ಆರೋಪಿತರಾದ ನೀವುಗಳು ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿ ಮಾಡಿ, ಅಫಜಲಪೂರದಲ್ಲಿರುವ ಮಹಾಂತೇಶ್ವರ ಏಜನ್ಸಿ ಪೆಟ್ರೋಲ ಪಂಪ ಬಗಲೂರನಲ್ಲಿರುವ ಭಾಗ್ಯವಂತಿ ಪೆಟ್ರೋಲ ಪಂಪ ಮತ್ತು ಘತ್ತರಗಾ ಹತ್ತಿರ ಇರುವ ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ದಿನಾಂಕಃ 24.01.2013 ರಿಂದ 21.02.2013 ರ ಅವಧಿಯಲ್ಲಿ ಸದರ ಇಂಡೆಂಟ ಸ್ಲಿಪಗಳನ್ನು ಕೊಟ್ಟು ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ಮೋಸ ವಂಚನೆ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.465 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಲಾದ ದಿನಾಂಕದಂದು ಆರೋಪಿತರಾದ ನೀವುಗಳು ನಿಮ್ಮ ಸ್ವಂತ ಲಾಭಕ್ಕೊಸ್ಕರ ರೇಣುಕಾ ಶುಗರ ಫ್ಯಾಕ್ಟ್ರಿಗೆ ಮೋಸ ಮಾಡುವ ಉದ್ದೇಶದಿಂದ ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.468 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಸದರಿ ಆರೋಪಿತರಾದ ನೀವುಗಳು ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯ್ಯಾರಿಸಿ ಇಂಡೆಂಟಗಳ ಮೇಲೆ ಚಾಸಾ-4 ರಮೇಶ ಮಾಳಗಿ ರವರ ನಕಲಿ ಸಹಿ ಮಾಡಿ, ಅಫಜಲಪೂರದಲ್ಲಿರುವ ಮಹಾಂತೇಶ್ವರ ಏಜನ್ಸಿ ಪೆಟ್ರೋಲ ಪಂಪ ಬಗಲೂರನಲ್ಲಿರುವ ಭಾಗ್ಯವಂತಿ ಪೆಟ್ರೋಲ ಪಂಪ ಮತ್ತು ಘತ್ತರಗಾ ಹತ್ತಿರ ಇರುವ ಮಲ್ಲಿಕಾರ್ಜುನ ಪೆಟ್ರೋಲ ಪಂಪಗಳಲ್ಲಿ ದಿನಾಂಕಃ 24.01.2013 ರಿಂದ 21.02.2013 ರ ಅವಧಿಯಲ್ಲಿ ಸದರ ಇಂಡೆಂಟ ಸ್ಲಿಪಗಳನ್ನು ಕೊಟ್ಟು ಒಟ್ಟು 2265 ಲೀಟರ ಡಿಜಲನ್ನು ತೆಗೆದುಕೊಂಡು ಬಂದು ಬೇರೆಕಡೆ ಯಲ್ಲಿಯೋ ಮಾರಾಟ ಮಾಡಿ ಒಟ್ಟು ರೂ.1,19,051/- ರೂಪಾಯಿಗಳ ಹಣ ಪಡೆದುಕೊಂಡು ರೇಣುಕಾ ಶುಗರ ಫ್ಯಾಕ್ಟ್ರಿ ಕಾರಖಾನೆಗೆ ವಂಚನೆ ಮತ್ತು ಮೋಸ ಮಾಡಿದ್ದು, ಆ ಮೂಲಕ ನೀನು ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.420 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

7. ಮೇಲೆ ಹೇಳಲಾದ ದಿನಾಂಕದಂದು 5ನೇ ಆರೋಪಿಯಾದ ನೀವು ನಿಮ್ಮ ಸ್ವಂತ ಲಾಭಕ್ಕೊಸ್ಕರ ರೇಣುಕಾ ಶುಗರ ಫ್ಯಾಕ್ಟ್ರಿಗೆ ಮೋಸ ಮಾಡುವ ಉದ್ದೇಶದಿಂದ ರೇಣುಕಾ ಶುಗರ ಫ್ಯಾಕ್ಟ್ರಿಯ ಪೆಟ್ರೋಲ ಬಂಕಿನಲ್ಲಿದ್ದ ಕಂಪ್ಯೂಟರನಲ್ಲಿ ಖೊಟ್ಟಿ ಸ್ಲಿಪಗಳನ್ನು ತಯಾರಿಸಲು 1 ಮತ್ತು 3ನೇ ಅರೋಪಿತರಿಗೆ ಪ್ರಚೋದನೆ ನೀಡಿದ ಕಾರಣ, ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.109 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

## ಆರೋಪಿತರ ಹೇಳಿಕೆ

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-3

ಆ-5

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-3

ಆ-5

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 14-02-2025

ಪ್ರ.ದ.ನ್ಯಾ.ದಂ. ಅಫಜಲಪೂರ.